ಕಥೆ

# ಗಳಿಗೆಯ ಬೇಟ

■ ಕಲ್ಲೇಶ್ ಕುಂಬಾರ್

ಮೊನ್ನೆ ದಿನ ಸಂಜೆ ಹೊತ್ತಲ್ಲಿ ಜಿರಲಿ ಪಂಡಿತನ ಹತ್ತಿರ ಹೋಗಿ ಬಂದಾಗಿನಿಂದ ಮಂಗಲವ್ವ ಮಾತ್ರ ಮನೆ ಹೊಸಲು ದಾಟಿ ಹೊರಗೆ ಬಂದಿರಲಿಲ್ಲ! ಆಗಿನಿಂದಲೂ ಆಕೆ ಸುತ್ತಲಿನ ಲೋಕದಲ್ಲಿ ಸಂಭವಿಸುವ ಎಲ್ಲ ಕ್ರಿಯೆಗಳೊಂದಿಗಿನ ಸಂಬಂಧದ ತಂತುವನ್ನು ಕಡಿದುಕೊಂಡು ಒಳಕೋಣೆಯೊಳಗೆ ಆಕಾಶವೇ ಕಳಚಿ ಬಿದ್ದವರಂಗೆ ತಲೆ ಮೇಲೆ ಕೈಹೊತ್ತು ಕುಂತಿದ್ದಳು. ಆ ಹೊತ್ತಲ್ಲಿ ಆಕೆಯ ಎದೆಯೊಳಗೆ ಏನಕೇನ ಕಾರಣವಾಗಿ ಇನ್ನಿಲ್ಲದ ಸಂಕಟವೊಂದು ಶುರುವಾಗಿತ್ತು. ಆ ಸಂಕಟದಲ್ಲಿ ಸರಿದು ಹೋಗುತ್ತಿರುವ ಕಾಲದ ಪರಿವೇ ಇಲ್ಲದಂಗೆ ಆಕೆ ಶೂನ್ಯದಲ್ಲಿ ದೃಷ್ಟಿ ನೆಟ್ಟು ಕುಂತಿದ್ದಳು.

ಹೀಗೆ ಹಗಲು ರಾತ್ರಿಗಳನ್ನು ಒಂದು ಮಾಡಿದವರಂತೆ ಗಾಢವಾಗಿ ಚಿಂತೆಯೊಳಗೆ ಮುಳುಗಿ ಹೋಗಿದ್ದ ಮಂಗಲವ್ವನಿಗೆ ತನಗೆ ಒದಗಿ ಬಂದ ದಯನೀಯ ಸ್ಥಿತಿಯಿಂದ ಪಾರಾಗುವ ದಾರಿ ಗೋಚರಿಸದೇ ಕಂಗಾಲಾಗಿ ಹೋಗಿದ್ದಳು. ಇದರಿಂದಾಗಿ ಎದಕೆದಕೋ ಎಂಬಂತೆ ಕಳೆದ ಮೂರು ನಾಕು ತಿಂಗಳ್ಹಿಂದೆ ತನ್ನ ಬದುಕಿನಲ್ಲಿ ಅಚಾನಕ್ ಆಗಿ ಸಂಭವಿಸಿದ ಆ ಒಂದು ಘಟನೆಯ ಹಿಂದಿನ ಕಾರಣವನ್ನು ಆಕೆ ಶೋಧಿಸುತ್ತ ಹೋದಂತೆ ಜೀವ ಝಲ್ ಎಂದು ಗಾಬರಿಯಾಯಿತು. ಆ ಗಾಬರಿಯಲ್ಲಿ ಇಡಿಯಾಗಿ ತನ್ನ ತುಂಬು ದೇಹವನ್ನು ತನ್ನ ಕಣ್ಣಳತೆಯಲ್ಲಿ ತಾನೇ ನೋಡಿಕೊಂಡು ಬೆಚ್ಚಿಬಿದ್ದಳು! ಆಗ ಇದ್ದಕ್ಕಿದ್ದಂಗೆ ಆಕೆಯ ಸ್ಮೃತಿಪಟಲದ ಮೇಲೆ ಮಲ್ಲೇಶಿಯ ಚಿತ್ರ ಮೂಡಿ ಬರಲು ಕುಂತಲ್ಲೇ ಮಿಸುಕಾಡಿದಳು. ಆದರೆ, ಈಗ ಹದನಿಪ್ಪತ್ತು ದಿನಗಳಿಂದ ಮಲ್ಲೇಶಿಯ ಮಾರಿಯನ್ನೇ ನೋಡಿರದಿದ್ದ ಮಂಗಲವ್ವನಿಗೆ ಈ ದಿನ ಹೀಗೆ ನೆನಪಾಗುವುದಕ್ಕೆ ಬೇರೆಯದೇ ಕಾರಣವಿತ್ತು. ಅದಾದ ಮೇಲೆ ಆತನ ವಿಚಾರದಲ್ಲಿ ಎಲ್ಲವನ್ನೂ ಮರೆತಿದ್ದಳಾದರೂ ಮೊನ್ನೆ ದಿನ ಸಂಜೆ ಹೊತ್ತಲ್ಲಿ ತನ್ನ ಸಂಶಯವನ್ನು ನಿವಾರಿಸಿಕೊಳ್ಳಲೆಂದು ಜಿರಲಿ ಪಂಡಿತನ ಹತ್ತಿರ ಹೋದಾಗ, 'ಇನ್ನೇನಿದ್ರೂ ಈ ಟೈಮಿನ್ಯಾಗ ನೀನs ಧೈರ್ಯ ತಗೋಬೇಕು...' ಎಂದು ಆತ ಅಂದ ಮಾತುಗಳು ಪದೇ ಪದೇ ಆಕೆಯ ಕಿವಿಯೊಳಗೆ ಪ್ರತಿಧ್ವನಿಸಿದಂತಾಗುತ್ತಿದ್ದವು. ಇದರಿಂದಾಗಿ ಕಂಗಾಲಾಗಿ ಹೋಗಿದ್ದ ಆಕೆಯ ಸ್ಥಿತಿ ಹೇಳತೀರದಷ್ಟು ಬಿಗಡಾಯಿಸಿ ಹೋಗಿತ್ತು. ಆದರೆ ಆಕೆಯ ಇಂಥ ದಯನೀಯ ಸ್ಥಿತಿಗೆ ಪರೋಕ್ಷವಾಗಿ ಚಂದಪ್ಪನೇ ಕಾರಣನಾಗಿದ್ದ!

***

ಮಂಗಲವ್ವ ಅದಾವ ಗಳಿಗೆಯಲ್ಲಿ ಚಂದಪ್ಪ ಕಟ್ಟಿದ ಗುಳದಾಳಿಗೆ ತನ್ನ ಕೊರಳೊಡ್ಡಿ ಹೊಸದಾಗಿ ನಡೆಯಲೆಂದು ಈ ಮನೆಗೆ ಬಂದಳೋ ಆಗಲೇ ಯಾರಲ್ಲೂ ತೋಡಿಕೊಳ್ಳಲಾಗದ ಅಸಹನೀಯವಾದ ಸಂಕಟವೊಂದು ಆಕೆಯ ಬೆನ್ನು ಬಿದ್ದಿತ್ತು. ಚಂದಪ್ಪನ ಮನೆಯಲ್ಲಿ ಆಕೆಗೆ ಉಣ್ಣಲು ತಿನ್ನಲು ಏನೂ ಕಮ್ಮೀ ಇರಲಿಲ್ಲವಾದರೂ ಸಹ ಅದನ್ನೂ ಮೀರಿದ, ಕುಂತಲ್ಲಿ ನಿಂತಲ್ಲಿ ಮಂಗಲವ್ವನ ಎದೆಯನ್ನು ಮೀಟುತ್ತಿದ್ದ ಬಯಕೆಯನ್ನು ಮದಿವಿಯಾಗಿ ಐದಾರು ವರ್ಷ ಕಳೆದರೂ ಈಡೇರಿಸಿಕೊಳ್ಳಲಾಗದ ನೋವು ಮಾತ್ರ ಆಕೆಯನ್ನು ಸದಾ ಕಾಡುತ್ತಿತ್ತು. ಆ ಬಯಕೆ ಬೇರೇನೂ ಆಗಿರದೆ ಎಲ್ಲರನ್ನೂ ಕಾಡುವ ದೇಹ ವಾಂಛೆಯೇ ಆಗಿತ್ತು! ಅಷ್ಟಕ್ಕೂ ಮಂಗಲವ್ವನ ಆ ಬಯಕೆಯನ್ನು ಈಡೇರಿಸುವ

